ಅಸಲು ದಾವೆ ನಂಃ 294/2017 ಪಿ.ಡಬ್ಲ್ಯೂ2-ಕೃಷ್ಣಾಸಾ ಶಿಂಗ್ರಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 26/03/2025 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ **VSB** ವಕೀಲರಿಂದಃ

1. ನಾನು ಹುಟ್ಟಿದಾಗಿನಿಂದಲೂ ಗಜೇಂದ್ರಗಡದಲ್ಲಿ ವಾಸವಾಗಿದ್ದೇನೆ. ನನಗೆ ವಾದಿ ಚಂದ್ರಗೌಡ ಮತ್ತು ನಾಗರಾಜ ಇವರ ಪರಿಚಯಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಚಂದ್ರಗೌಡ ಮತ್ತು ನಾಗರಾಜ ಇವರ ನಡುವೆ ನಡೆದ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ಸದರಿ ವ್ಯವಹಾರ ನೊಂದಣಿ ಆಫೀಸ್ ನಲ್ಲಿ ಆಗಿರುತ್ತದೆ. ನಾಗರಾಜ ಇವರು 8 ಗುಂಟೆ ಪ್ಲಾಟ್ ನ್ನು ವಾದಿಗೆ ಕೊಡುತ್ತಿದ್ದರು. ಸದರಿ ಮಾತುಕತೆ ಎಷ್ಟಕ್ಕೆ ಆಯಿತು, ವಾದಿ ಎಷ್ಟು ಹಣಕ್ಕೆ ಕೇಳಿದ ಎಂದು ನನಗೆ ಗೊತ್ತಿಲ್ಲ. ಮಾತುಕತೆಯಾದಾಗ ನಾನು ಇರಲಿಲ್ಲ , ಆದರೆ ಸಬ್ ರಜಿಸ್ಟರ ಆಫೀಸ ನಲ್ಲಿ ಸಹಿ ಮಾಡುವಾಗ ನಾನು ಆ ಪತ್ರವನ್ನು ಓದಿ ತಿಳಿದುಕೂಂಡು ವಾದಿ 8 ಗುಂಟೆ ಪ್ಲಾಟ್ ಖರೀದಿ ಮಾಡುತ್ತಿದ್ದಾರೆ ಎಂದು ಗೊತ್ತಾದ ನಂತರ ಸಹಿ ಮಾಡಿದ್ದೇನೆ. ನನಗೆ ಮರದ್ ಎಂಬುವವರು ಕರೆದರು. ಈಗ ಮರದ್ ಇವರು ತೀರಿಕೊಂಡಿದ್ದಾರೆ. ನಾನು ಆ ದಿನ ಎಷ್ಟು ಸಹಿ ಮಾಡಿದ ಎಂದು ನನಗೆ ನೆನಪಿಲ್ಲ. ಆ ದಿನ ಎಷ್ಟು ಆಸ್ತಿಗಳ ಬಗ್ಗೆ ನೊಂದಣಿಯಾಯಿತು ಎಂದರೆ ಸಾಕ್ಷಿ ಸರ್ವೇ ನಂಬರ 91/5 ಮತ್ತು 91/6 ಆಸ್ತಿ ಸಂಬಂಧಪಟ್ಟಂತೆ ನೊಂದಣಿಯಾಯಿತು. ಸದರಿ ಆಸ್ತಿಗಳನ್ನು ನಾನು ನೋಡಿಲ್ಲ. ಮರದ್ ಎಂಬುವವರು ನನಗೆ ತಮ್ಮನಾಗಬೇಕು. ಅಲ್ಲಿ ಪ್ಲಾಟ್ ಖರೀದಿಗೆ ಕೊಡುತ್ತಿದ್ದಾರೆ ಹಾಗೂ ವಾದಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಗೊತ್ತಾದ ನಂತರ ನಾನು ಸಾಕ್ಷಿಯಾ ಸಹಿ ಹಾಕಿದೆ. ನಾನು ನಾಗರಾಜ ಇವರನ್ನು ವಿಚಾರ ಮಾಡಿದೆ. ಅಧಿಕಾರಿಗಳು ಓದಿದ ನಂತರ ನನಗೆ ಗೊತ್ತಾಯಿತು.ವಿರುಪಾಕ್ಷಪ್ಪ ಪೋತದಾರ ಸಹ ನನಗೆ ಓದಿ ಹೇಳಿದರು. ಈ ಎಲ್ಲಾ ಓದಿದ ನಂತರ ನಾನು ನಾಗರಾಜ ಇವರಿಗೆ ಕೇಳಿದೆ. ನನ್ನ ಸಮಕ್ಷಮ ದುಡ್ಡು ಕೊಡುವುದು ಮತ್ತು ತೆಗೆದುಕೊಳ್ಳುವುದು ಆಗಲಿಲ್ಲ. ಸಂಚಗಾರ ಪತ್ರವನ್ನು ನಾನೇ ತಯಾರು ಮಾಡಿ ಅದಕ್ಕೆ ನಾನೇ ದಸ್ತುರು ಎಂದು ಸಹಿ ಮಾಡಿದ್ದೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಆಸ್ತಿಯ ಚೆಕ ಬಂದಿಯನ್ನು ನಾನು ಬರೆಸಿಲ್ಲ. ವಾದಿಯು ಹಣದ ಭದ್ರತೆಗಾಗಿ ಪ್ರತಿವಾದಿಯ ಕಡೆಯಿಂದ ಈ ಸಂಚಗಾರ ಪತ್ರವನ್ನು ಮಾಡಿಸಿದ್ದು ಹಾಗೂ ನನಗೆ ಏನು ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ನನಗೆ ಫುಸಲಾಯಿಸಿ ಈ ಸಂಚಗಾರ ಪತ್ರಕ್ಕೆ ಸಹಿ ಮಾಡಿಸಿದ್ದಾರೆ ಎಂದರ ಸರಿಯಲ್ಲ. ನನ್ನ ಸಮಕ್ಷಮ ಚಂದ್ರಗೌಡ ನಾಗರಾಜನಿಗೆ ಖರೀದಿ ಪತ್ರ ಬರೆದು ಕೊಡು ಎಂದು ನನ್ನ ಕರೆದುಕೊಂಡು ಹೋಗಿ ಕೇಳಿಲ್ಲ.ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಆಮಿಷಕ್ಕೆ ಒಳಗಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ತ ಆರ್ ಕಲಾಲ್ )**
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.